■ ಹನಿ



# ದೋನಿಗೆ ರಜೆ

'ಮಹೇಂದ್ರಸಿಂಗ್ ದೋನಿ ಅವರಿಗೆ ಗಾಯವಾಗಿದೆ. ಹಾಗಾಗಿ ಏಷ್ಯಾ ಕಪ್ ಕ್ರಿಕೆಟ್‌ನಲ್ಲಿ ಅವರು ಭಾಗವಹಿಸುವುದಿಲ್ಲ' ಎಂದು ಬಿಸಿಸಿಐ ಪ್ರಕಟಿಸಿದೆ. 'ಏಷ್ಯಾ ಕಪ್‌ನಲ್ಲಿ ಭಾಗವಹಿಸುವ ಭಾರತದ ತಂಡದಿಂದ ದೋನಿಯನ್ನು ಕೈಬಿಡಲಾಗಿದೆ' ಎಂದು ನೇರವಾಗಿ ಹೇಳುವ ಬದಲು, ಬಿಸಿಸಿಐ ಸ್ವಲ್ಪ ಜಾಣತನದಿಂದ ಹೇಳಿಕೆ ನೀಡಿದೆ. ಟೆಸ್ಟ್‌ನಲ್ಲಿ ಮತ್ತು ಒಂದು ದಿನ ಪಂದ್ಯದಲ್ಲಿ ಒಂದು ಗೆಲುವು ಕೂಡಾ ದಕ್ಕದೆ ನ್ಯೂಜಿಲೆಂಡಿನಿಂದ ಬರಿಗೈಯಲ್ಲಿ ವಾಪಸ್ ಬಂದಿರುವ ಭಾರತ ತಂಡದ ನಾಯಕ ದೋನಿಗೆ ಇದು ಕಷ್ಟಕಾಲ. ಅದರಲ್ಲೂ ಟೆಸ್ಟ್ ಪಂದ್ಯಗಳಲ್ಲಿ ನಾಯಕನಾಗಿ ದೋನಿಯ ಸಾಧನೆಗಳು ಅಧೋಮುಖಿಯಾಗಿವೆ. ವಿದೇಶೀ ನೆಲದಲ್ಲಿ ದೋನಿ ನಾಯಕತ್ವದಲ್ಲಿ ಭಾರತ ಆಡಿದ 11 ಟೆಸ್ಟ್‌ಗಳನ್ನು ಸೋತಿದೆ. ಈ ಹಿಂದೆ ಮನ್ಸೂರ್ ಅಲಿ ಖಾನ್ ಪಟೌಡಿ, ಮೊಹಮ್ಮದ್ ಅಜರುದ್ದೀನ್ ಮತ್ತು ಸೌರವ್ ಗಂಗೂಲಿ ನಾಯಕತ್ವದಲ್ಲಿ ವಿದೇಶಗಳಲ್ಲಿ ಆಡಿರುವ ಪಂದ್ಯಗಳಲ್ಲಿ 10 ಟೆಸ್ಟ್ ಪಂದ್ಯಗಳನ್ನು ಸೋತಿದ್ದು ದಾಖಲೆಯಾಗಿತ್ತು. ಆ ದಾಖಲೆಯನ್ನು ಈಗ ದೋನಿ ಮುರಿದಿದ್ದಾರೆ. ಇದೇ ಸಮಯ ಎಂಬಂತೆ ಗಂಗೂಲಿ, ಗಾವಸ್ಕರ್ ಸಹಿತ ಖ್ಯಾತನಾಮರೆಲ್ಲ ದೋನಿ ನಾಯಕತ್ವದ ವಿರುದ್ಧ ಕತ್ತಿ ಝಳಪಿಸತೊಡಗಿದ್ದಾರೆ.

ದೋನಿ ನಿಜಕ್ಕೂ ಆಡಲಾಗದಷ್ಟು ಗಾಯಗೊಂಡಿದ್ದಾರೆಯೆ ಎನ್ನುವ ಬಗ್ಗೆ ಸಂಶಯಗಳಿವೆ. ನ್ಯೂಜಿಲೆಂಡಿನ ಎರಡನೆ ಟೆಸ್ಟ್‌ನಲ್ಲಿ ಸಣ್ಣ ಗಾಯವಾದದ್ದು ಹೌದು. ಆದರೆ ಈ ಸಲದ ವಿದೇಶ ಪ್ರವಾಸದಲ್ಲಿ ತಂಡದ ಕಳಪೆ ಪ್ರದರ್ಶನದಿಂದ ಅವರು ಮಾನಸಿಕವಾಗಿ ಗಾಯಗೊಂಡಿರುವುದಂತೂ ನಿಜ. ವಿದೇಶದಲ್ಲಿ ಅವರ ನಾಯಕತ್ವದಲ್ಲಿ ಆಡಿದ 21 ಟೆಸ್ಟ್ ಪಂದ್ಯಗಳಲ್ಲಿ ಗೆಲುವು ಸಿಕ್ಕಿರುವುದು ಐದರಲ್ಲಿ ಮಾತ್ರ. ಸ್ವದೇಶದ ಟೆಸ್ಟ್‌ಗಳಲ್ಲಾದರೆ 26 ಗೆಲುವು–12 ಸೋಲು ಮತ್ತು 11 ಡ್ರಾಗಳ ಹಿರಿಮೆ ಅವರದ್ದು. 2011ರ ಜೂನ್‌ನಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಗೆಲುವು ಸಾಧಿಸಿದ ಬಳಿಕ ಭಾರತ ಟೆಸ್ಟ್ ತಂಡ ವಿದೇಶೀ ನೆಲದಲ್ಲಿ ಸತತ ಹತ್ತು ಸೋಲುಗಳನ್ನು ದಾಖಲಿಸಿದೆ. ಬಹುಶಃ ಟೆಸ್ಟ್ ನಾಯಕತ್ವದಿಂದ ದೋನಿಯನ್ನು ಕೆಳಗಿಳಿಸುವುದು ಬಿಸಿಸಿಐ ಗೆ ಅನಿವಾರ್ಯವಾಗಬಹುದು. ಒಟ್ಟು 50 ಟೆಸ್ಟ್‌ಗಳಲ್ಲಿ ಭಾರತದ ನಾಯಕತ್ವ ವಹಿಸಿರುವ ದೋನಿ ಆ ಪಟ್ಟಿಯಲ್ಲಿ ಹಿಂದೆ ಇದ್ದ ಸೌರವ್ ಗಂಗೂಲಿ (49 ಟೆಸ್ಟ್ ನಾಯಕತ್ವ) ದಾಖಲೆಯನ್ನೂ ಮುರಿದಿದ್ದಾರೆ.

ಐಸಿಸಿ ಯ ನಿಗದಿತ ಓವರ್‌ಗಳ ಎಲ್ಲ ಮೂರು ಪ್ರಕಾರಗಳಲ್ಲೂ ಭಾರತಕ್ಕೆ ಕಪ್‌ಗಳನ್ನು ಗೆದ್ದು ಕೊಟ್ಟಿರುವ ಏಕೈಕ ನಾಯಕ ದೋನಿ. ಹಾಗಾಗಿ ಏಕದಿನದ ಪಂದ್ಯಗಳಲ್ಲಿ ಅವರ ನಾಯಕತ್ವ ಅಬಾಧಿತ ಎನ್ನಬಹುದು. ಆದರೆ ಟೆಸ್ಟ್ ನಾಯಕತ್ವಕ್ಕೆ ಸಂಬಂಧಿಸಿ ಪ್ರೇಕ್ಷಕರ ತಾಳ್ಮೆಯನ್ನು ಅವರು ಇನ್ನೆಷ್ಟು ಕಾಲ 'ಟೆಸ್ಟ್' ಮಾಡಬೇಕೋ?

# ಬಪ್ಪಿ ದಾ ಡಿಸ್ಕೊ



ಪಶ್ಚಿಮ ಬಂಗಾಳದಲ್ಲಿ ರಾಜಕೀಯಕ್ಕೆ ಡಿಸ್ಕೊ ಪ್ರವೇಶಿಸಿದೆ. ಇತ್ತೀಚೆಗಷ್ಟೇ 'ಡಿಸ್ಕೊ ಡ್ಯಾನ್ಸರ್' ಸಿನಿಮಾ ಖ್ಯಾತಿಯ ನಟ ಮಿಥುನ್ ಚಕ್ರವರ್ತಿ ಟಿಎಂಸಿ ಪಕ್ಷದ ವತಿಯಿಂದ ರಾಜ್ಯಸಭೆ ಸದಸ್ಯರಾಗಿದ್ದಾರೆ. ಈಗ ಅದೇ ಡಿಸ್ಕೊ ಡ್ಯಾನ್ಸರ್ ಗೆ ಸಂಗೀತ ಸಂಯೋಜನೆ ಮಾಡಿದ ಗಾಯಕ ಬಪ್ಪಿ ಲಹಿರಿ, ಬಿಜೆಪಿ ಸೇರಿದ್ದಾರೆ. ಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್‌ನಲ್ಲಿ ಬಪ್ಪಿ ದಾ ಚುನಾವಣೆಗೆ ನಿಲ್ಲುವ ಸುದ್ದಿಯೂ ಹಬ್ಬಿದೆ.

19ರ ಹರೆಯದಲ್ಲೇ ಕೋಲ್ಕತ್ತಾ ತ್ಯಜಿಸಿ ಮುಂಬೈ ಸೇರಿದವರು ಬಪ್ಪಿ ಲಹಿರಿ. ಭಾರತೀಯ ಸಿನಿಮಾಗಳಿಗೆ ಪಾಶ್ಚಾತ್ಯ ಕೀಬೋರ್ಡ್‌ಗಳ ಸಂಗೀತದ ರುಚಿ ಹತ್ತಿಸಿದ್ದು ಬಪ್ಪಿ ದಾ ಹೆಗ್ಗಳಿಕೆ. ಈಗ 62ರ ಹರೆಯದಲ್ಲಿ ಅವರಿಗೆ ರಾಜಕೀಯದ ರುಚಿ ಹಿಡಿಸತೊಡಗಿದೆ. 75ರಲ್ಲಿ 'ಜಖ್ಮೀ' ಚಿತ್ರದಲ್ಲಿ ಮೊಹಮ್ಮದ್ ರಫಿ ಮತ್ತು ಕಿಶೋರ್ ಕುಮಾರ್ ಜತೆಗೆ ಹಾಡಿದ್ದ ಬಪ್ಪಿ ಲಹಿರಿ, 76ರಲ್ಲಿ ಸಂಗೀತ ನೀಡಿದ 'ಚಲ್ತೇ ಚಲೇ' ಹಾಡುಗಳು ಸೂಪರ್‌ಹಿಟ್ ಆದವು. ಆ ಬಳಿಕ ಅವರು ನಡೆದದ್ದೇ ರಾಜಮಾರ್ಗ. ರಂಭಾ ಹೋ, ಹರಿ ಓಂ ಹರಿ, ಐ ಆ್ಯಮ್ ಎ ಡಿಸ್ಕೊ ಡ್ಯಾನ್ಸರ್ ಹಾಡುಗಳಂತೂ ಈಗಲೂ ಚಿತ್ರಪ್ರೇಮಿಗಳ ಸ್ಮರಣೆಯಲ್ಲಿವೆ. 96ರಲ್ಲಿ ಮೈಕೆಲ್ ಜಾಕ್ಸನ್‌ನ ಮುಂಬೈ ಷೋಗೆ ಬಾಲಿವುಡ್‌ನಿಂದ ಆಹ್ವಾನ ಪಡೆದ ಏಕೈಕ ಸಂಗೀತ ನಿರ್ದೇಶಕ ಬಪ್ಪಿ ದಾ. ಚುನಾವಣೆಯಲ್ಲಿ ಬಪ್ಪಿ ಗೆದ್ದರೆ ಅವರ ಬದುಕಿಗೆ ಹೊಸದೊಂದು ತಿರುವು ಸಿಕ್ಕಿದಂತೆಯೇ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65